ಪುಟ-2
ಕ್ರಾಂತಿಯಕಿಡಿ
ಶನಿವಾರ
17 ಜುಲೈ 2021
ಕಾಯಕಯೋಗಿ
KAYAKAYOGI-MORNING DAILY
ಕನ್ನಡ ದಿನಪತ್ರಿಕೆ


## ಡಿಸಿಗಳೊಂದಿಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವೀಡಿಯೋ ಸಂವಾದ

# ಪ್ರಕೃತಿ ವಿಕೋಪ ತಡೆ ಸಮಗ್ರ ಕ್ರಮಕ್ಕೆ ಸೂಚನೆ

ನವದೆಹಲಿ : ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲಾಧಿ ಕಾರಿಗಳೊಂದಿಗೆ, ಕರಾವಳಿ, ಮಲೆನಾಡು ಭಾಗಗಳಲ್ಲಿನ ಭಾರಿ ಮಳೆ, ಪ್ರಕೃತಿ ವಿಕೋಪ ನಿಯಂತ್ರಣ ಕ್ರಮಗಳ ಕುರಿತಂತೆ ವೀಡಿಯೋ ಸಂವಾದ ನಡೆಸಿದರು.

ಬೆಳಿಗ್ಗೆ 9 ಕ್ಕೆ ತಮ್ಮ ದೆಹಲಿಯ ಕಛೇರಿ ಕೃಷಿ ಭವನಕ್ಕೆ ತೆರಳಿ ವಿಡಿಯೋ ಕಾನ್ಫರನ್ಸ್ ಮೂಲಕ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು, ಮಳೆಯಿಂದಾಗಲಿರುವ ಪ್ರಕೃತಿ ವಿಕೋಪಗಳ ಕುರಿತು, ಜಿಲ್ಲೆಯಲ್ಲಿನ ಕೋವಿಡ್ ನಿರ್ವಹಣೆ, 3ನೇ ಅಲೆಗೆ ಜಿಲ್ಲೆ ನಡೆಸಿರುವ ತಯಾರಿಗಳು ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳ ಕುರಿತು ಚರ್ಚಿಸಿ ಮಾಹಿತಿ ಪಡೆದರು.

ಈ ವೇಳೆ ಕ್ಷಣ ಕ್ಷಣದ ಮಾಹಿತಿ ನೀಡುವಂತೆ ಸೂಚಿಸಿದ್ದು, ಜನರ ಕಷ್ಟ- ನಷ್ಟಗಳಿಗೆ ಧಾವಿಸುವ ಸಂದರ್ಭ ಒದಗಿಬಂದರೆ ಸೂಕ್ತ ವ್ಯವಸ್ಥೆ ಹೊಂದಿಸಿಕೊಳ್ಳುವಂತೆ ಸೂಚಿಸಿರುತ್ತಾರೆ. ದೆಹಲಿಯಿಂದಲೇ ತಮ್ಮ ಸಂಸದೀಯ ಕ್ಷೇತ್ರದ ಜನ-ರೈತರ ಕಾಳಜಿಯ ಬಗ್ಗೆ ಕಳಕಳಿ ವ್ಯಕ್ತಪಡಿಸಿದರು.



## ವಿಶ್ವನಾಥ್ ಚಾಮರಾಜನಗರ ವರದಿಗಾರ



ಕಾಯಕಯೋಗಿ ದಿನಪತ್ರಿಕೆಯ ಚಾಮರಾಜನಗರ ಜಿಲ್ಲಾ ವರದಿಗಾರರಾಗಿ ಬಿ.ಆರ್.ವಿಶ್ವನಾಥ್ ಅವರನ್ನು ನೇಮಕಗೊಳಿಸಲಾಗಿದೆ. ನಮ್ಮೆಲ್ಲಾ ಓದುಗರು, ಅಧಿಕಾರಿವರ್ಗ, ಜನಪ್ರತಿನಿಧಿಗಳು, ಸಂಘ ಸಂಸ್ಥೆ ಮುಖಂಡರು, ಸುದ್ದಿ ಹಾಗೂ ಜಾಹೀರಾತುಗಳಿಗೆ ವಿಶ್ವನಾಥ್ ಅವರನ್ನು ಸಂಪರ್ಕಿಸಲು ಕೋರಲಾಗಿದೆ.


ವಿಶ್ವನಾಥ್ ಬಿ.ಆರ್.
ಮೊ : 9986638679 -ಸಂಪಾದಕಿ.

# ಶ್ರೀ ಚಾಮರಾಜೇಶ್ವರ ದೇವಸ್ಥಾನ ಅಭಿವೃದ್ಧಿಗೆ ಕ್ರಮ: ಶ್ರೀನಿವಾಸ ಪೂಜಾರಿ

ಚಾಮರಾಜನಗರ: ಇತಿಹಾಸ ಪ್ರಸಿದ್ಧ ಶ್ರೀ ಚಾಮರಾಜೇಶ್ವರ ದೇವಸ್ಥಾನಕ್ಕೆ ಮುಜರಾಯಿ ಇಲಾಖೆ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು ಶುಕ್ರವಾರದಂದು ಭೇಟಿ ನೀಡಿ ದೇವಸ್ಥಾನದ ಅಭಿವೃದ್ಧಿ ಸಂಬಂಧ ಚರ್ಚಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು ಬೆಂಗಳೂರಿಗೆ ತೆರಳಿದ ಬಳಿಕ ಶ್ರೀ ಚಾಮರಾಜೇಶ್ವರ ದೇಗುಲ ಅಭಿವೃದ್ಧಿಗಾಗಿ ಒಂದು ತಂಡ ಕಳುಹಿಸಿ ವರದಿ ಪಡೆದು ಎಲ್ಲಾ ಭರವಸೆಗಳನ್ನು ಈಡೇರಿಸಲಾಗುವುದು. ನೂತನ ರಥದ ಕಾರ್ಯವು ಮುಗಿಯುತ್ತಿದೆ ಎಂದು ತಿಳಿಸಿದರು.

ಆಡಳಿತಾತ್ಮಕ ವಿಚಾರವಾಗಿ ಮುಖ್ಯಮಂತ್ರಿ ಬಿ .ಎಸ್ ಯಡಿಯೂರಪ್ಪ ಅವರು ದೆಹಲಿಗೆ ತೆರಳಿದ್ದಾರೆ. ಅವರ ಪ್ರವಾಸ ಆಡಳಿತದ ಒಂದು ಭಾಗವಾಗಿದ್ದು, ಯಾವುದೇ ನಾಯುಕತ್ವ ಗೊಂದಲವಿಲ್ಲ ಎಂದು ಮುಜರಾಯಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.



**"ಉತ್ತಮ ಆಡಳಿತವನ್ನು ಸಿಎಂ ಹಾಗೂ ಪಕ್ಷ ಸಂಘಟನೆಯನ್ನು ರಾಜ್ಯಾಧ್ಯಕ್ಷರು ನೋಡಿಕೊಳ್ಳುತ್ತಾರೆ. ದೆಹಲಿ ಪ್ರವಾಸಕ್ಕೆ ವಿಶೇಷ ಅರ್ಥ ಬೇಡ"**

ನಾಯಕತ್ವ ಬದಲಾವಣೆ ಬಗ್ಗೆ ನಮಗೆ ಯಾವುದೇ ಗೊಂದಲಗಳಿಲ್ಲ. ಉತ್ತಮ ಆಡಳಿತವನ್ನು ಸಿಎಂ ಹಾಗೂ ಪಕ್ಷ ಸಂಘಟನೆಯನ್ನು ರಾಜ್ಯಾಧ್ಯಕ್ಷರು ನೋಡಿಕೊಳ್ಳುತ್ತಾರೆ. ದೆಹಲಿ ಪ್ರವಾಸಕ್ಕೆ ವಿಶೇಷ ಅರ್ಥ ಬೇಡ ಎಂದರು.

ಈ ಸಂದರ್ಭದಲ್ಲಿ ಶಾಸಕ ಎನ್.ಮಹೇಶ್,ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ಸೇರಿದಂತೆ ಧಾರ್ಮಿಕ ದತ್ತಿ ಪರಿಷತ್ ಸದಸ್ಯರುಗಳು ಹಾಜರಿದ್ದರು.




ಮಂಡ್ಯದ ಪರಮಪೂಜ್ಯ ಸಿದ್ದಗಂಗಾ ಶ್ರೀಗಳ ಉದ್ಯಾನದಲ್ಲಿ ಸಸಿನೆಟ್ಟು ಕಾಯಕಯೋಗಿ ಸಸ್ಯೋತ್ಸವಕ್ಕೆ ಶುಭಕೋರಿದ ಬೆಂಗಳೂರಿನ ಪರಿಸರ ಪ್ರೇಮಿ ನಿವೃತ್ತ ಎಂಜಿನಿಯರ್ ಚಂದ್ರಶೇಖರ್ ಹಾಗೂ ಸುಂದರ್ ಅವರನ್ನು ಕಾಯಕಯೋಗಿ ಫೌಂಡೇಶನ್ ಅಧ್ಯಕ್ಷ ಎಂ.ಶಿವಕುಮಾರ್ ಅಭಿನಂದಿಸಿದರು. ಯುವಮುಖಂಡ ಎಂ.ಆರ್.ರಘು ಉಪಸ್ಥಿತರಿದ್ದರು.



ಚಾಮರಾಜನಗರಕ್ಕೆ ಭೇಟಿ ನೀಡಿದ ಮುಜರಾಯಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರನ್ನು ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ಅವರು ಅಭಿನಂದಿಸಿ,ಸನ್ಮಾನಿಸಿದರು. ಈ ಸಂದರ್ಭದಲ್ಲಿ ಶಾಸಕ ಎನ್.ಮಹೇಶ್, ವೇಣುಗೋಪಾಲ್ ಸೇರಿದಂತೆ ಇತರರು ಇದ್ದರು.

## ತೋಟಗಾರಿಕೆ ಇಲಾಖೆಯಿಂದ ತಾಳೆ ಬೆಳೆ ಪ್ರದೇಶ ವಿಸ್ತರಣೆಗೆ ಸಹಾಯಧನ

ಚಾಮರಾಜನಗರ : ತೋಟಗಾರಿಕೆ ಇಲಾಖೆ ವತಿಯಿಂದ 2021-22ನೇ ಸಾಲಿಗೆ ತಾಳೆಬೆಳೆ ಪ್ರದೇಶ ವಿಸ್ತರಣೆಗಾಗಿ ಸಹಾಯಧನ ನೀಡಲಾಗುತ್ತಿದೆ.

ತಾಳೆ ಬೆಳೆಯು ಪ್ರಪಂಚದಾದ್ಯಂತ ಸಾಗುವಳಿ ಮಾಡಲ್ಪಡುತ್ತಿರುವ ಖ್ಯಾದ್ಯ ತೈಲ ಬೆಳೆಗಳಲ್ಲಿ ಅತ್ಯಂತ ಹೆಚ್ಚು ತೈಲದ ಇಳುವರಿ ನೀಡುವ ಬೆಳೆಯಾಗಿದೆ. ಪ್ರತಿ ಹೇಕ್ಟೇರಿಗೆ ಪ್ರತಿ ವರ್ಷಕ್ಕೆ 4 ರಿಂದ 6 ಟನ್‌ಗಳಷ್ಟು ತೈಲದ ಇಳುವರಿ ನೀಡುವ ಸಾಮರ್ಥ್ಯ ಹೊಂದಿದೆ. ಪ್ರಸ್ತುತ ಜಾಗತಿಕ ಖಾದ್ಯ ತೈಲ ಮಾರುಕಟ್ಟೆಯಲ್ಲಿ ಅತ್ಯಂತ ಪ್ರಮುಖ ಸ್ಥಾನ ಹೊಂದಿರುವ ತಾಳೆ ಬೆಳೆಯು ಅಡುಗೆ-ತಿಂಡಿ ತಿನಿಸುಗಳ ತಯಾರಿಕೆ ಅಲ್ಲದೆ ವನಸ್ಪತಿ, ಸಾಬೂನು, ಗ್ಲಿಸರಿನ್ ಮತ್ತು ಪ್ಯಾರಾಫಿನ್ ತಯಾರಿಕೆಯಲ್ಲೂ ಬಳಸುವರು. ಹೆಚ್ಚು ಮಳೆ ಬೀಳುವ ಹಾಗೂ ನೀರಾವರಿ ಅನುಕೂಲವಿರುವ ಪ್ರದೇಶಗಳಲ್ಲಿ ತಾಳೆ ಬೆಳೆಯನ್ನು ಬೆಳೆಯಲಾಗುತ್ತಿದೆ.

ಕನಿಷ್ಠ ಕೂಲಿ ಕಾರ್ಮಿಕರ ಅವಶ್ಯಕತೆ, ಸಮೀಪ ಹಾಗೂ ಖಚಿತ ಮಾರುಕಟ್ಟೆ ವ್ಯವಸ್ಥೆ, ಕೀಟ ರೋಗಗಳ ಹಾವಳಿ ತುಂಬಾ ಕಡಿಮೆ, ಮಿಶ್ರ ಚಟುವಟಿಕೆಯಿಂದ ಹೆಚ್ಚುವರಿ ನೀಡುವುದು ತಾಳೆ ಬೆಳೆಯ ಉಪಯೋಗವಾಗಿದೆ.

ಹೆಚ್ಚು ಸಾವಯವಯುಕ್ತ ಉತ್ತಮ ರಚನೆಯನ್ನು ಹೊಂದಿದ, ನೀರು ಸುಲಭವಾಗಿ ಬಸಿದು ಹೋಗುವಂತಹ ಆಳವಾದ ಕೆಂಪುಗೋಡು ಮತ್ತು ಮಧ್ಯಮ ಕಪ್ಪು ಮಣ್ಣಿನಲ್ಲಿ ತಾಳೆ ಬೆಳೆಯು ಹೆಚ್ಚು ಇಳುವರಿ ಕೊಡುತ್ತದೆ. ತಾಳೆಗೆ 6.5 ರಿಂದ 7.5 ರ ರಸಸಾರ ಇರುವ ಮಣ್ಣು ಯೋಗ್ಯ. ಗರಿಷ್ಠ 29-330ಸೆ. ಉಷ್ಣಾಂಶ ಮತ್ತು ಕನಿಷ್ಠ 22-240ಸೆ. ಇರುವ ಪ್ರದೇಶಗಳು ತಾಳೆಬೆಳೆ ಬೆಳೆಯಲು ಉತ್ತಮ.

ನಾಟಿ ಮಾಡಲು ಜೂನ್-ಆಗಸ್ಟ್ ಸಮಯ ಅತ್ಯಂತ ಸೂಕ್ತವಾಗಿದೆ. ವರ್ಷದ ಯಾವುದೇ ಸಮಯದಲ್ಲಿ, ನೀರಾವರಿ ಪ್ರದೇಶದಲ್ಲಿ ತಾಳೆಗಿಡಗಳನ್ನು ನೆಡಬಹುದು. ಪ್ರತಿ ಎಕರೆಗೆ 57 ಸಸಿ ಅಥವಾ ಪ್ರತಿ ಹೆಕ್ಟೇರ್‌ಗೆ 143 ಸಸಿಗಳಂತೆ 9ಮೀ x 9ಮೀ x 9ಮೀ. ಅಂತರದ ತ್ರಿಕೋನ ಪದ್ಧತಿಯಲ್ಲಿ ನಾಟಿ ಮಾಡಬೇಕು.

ನಾಟಿ ಮಾಡಿದ ಮೊದಲನೆಯ ಮೂರು ವರ್ಷಗಳವರೆಗೆ ತಾಳೆ ಬೆಳೆಯ ತೋಟದಲ್ಲಿ ಬಾಳೆ, ದ್ವಿದಳಧಾನ್ಯಗಳು ಮತ್ತು ತರಕಾರಿ ಬೆಳೆಗಳನ್ನು ಅಂತರ ಬೆಳೆಯಾಗಿ ಬೆಳೆಯಬಹುದು. ನಾಟಿ ಮಾಡಿದ ನಾಲ್ಕು ವರ್ಷದ ನಂತರ ಇಳುವರಿ ಪ್ರಾರಂಭವಾಗುತ್ತದೆ. 10 ವರ್ಷ ವಯಸ್ಸಿನ ಇಳುವರಿ ನೀಡುವ ಅಥವಾ 15 ಅಡಿ ಎತ್ತರದ ನೆರಳಲ್ಲಿ ಕೊಕೋವಾ, ಕರಿಮೆಣಸು, ರೆಡ್ ಜಿಂಜರ್, ಹೆಲಿಕೋನಿಯಾ ಬೆಳೆಗಳನ್ನು ಬೆಳೆಯಬಹುದು.

ನಾಟಿ ಮಾಡಿದ 4 ವರ್ಷದ ನಂತರ ಇಳುವರಿ ಪ್ರಾರಂಭವಾಗುತ್ತದೆ. 10 ವರ್ಷ ಮೇಲ್ಪಟ್ಟ ತೋಟದಲ್ಲಿ ಪ್ರತಿ ಹೆಕ್ಟೇರ್‌ಗೆ ಅಂದಾಜು 25-30 ಟನ್ ತಾಳೆ ಗೊಂಚಲನ್ನು ಪಡೆಯಬಹುದು. ತಾಳೆ ಹಣ್ಣನ್ನು ಸಂಸ್ಕರಿಸಿದ ನಂತರ ಪ್ರತಿ ಹೆಕ್ಟೆರ್‌ಗೆ 5-6 ಟನ್ ತಾಳೆ ಎಣ್ಣೆಯನ್ನು ಪಡೆಯಬಹುದು.

ತೋಟಗಾರಿಕೆ ಇಲಾಖೆ ವತಿಯಿಂದ ಪ್ರದೇಶ ವಿಸ್ತರಣೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಈ ಕಾರ್ಯಕ್ರಮದಡಿಯಲ್ಲಿ ಇಲಾಖೆಯ ವತಿಯಿಂದ ತಾಳೆ ಸಸಿಗಳನ್ನು ನಾಟಿ ಮಾಡಲು ಉಚಿತವಾಗಿ ವಿತರಿಸಲಾಗುವುದು. ಪ್ರತಿ ಹೆಕ್ಟೇರ್‌ಗೆ 5 ಸಾವಿರ ರೂಗಳ ಸಹಾಯಧನವನ್ನು ರಾಸಾಯನಿಕ ಮತ್ತು ಸಾವಯವ ಗೊಬ್ಬರಗಳಿಗೆ ನೀಡಲಾಗುವುದು. ಅಂತರ ಬೆಳೆಯಾಗಿ ಬೆಳೆಯುವ ಹಣ್ಣು, ತರಕಾರಿ, ಹೂ, ಔಷಧೀಯ ಹಾಗೂ ಸುಗಂಧಿತ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ 5 ಸಾವಿರ ರೂಗಳ ಸಹಾಯಧನ ನೀಡಲಾಗುವುದು.

ತಾಳೆ ಬೆಳೆ ಉತ್ಪಾದನೆ ಹೆಚ್ಚಿಸಲು 12 ವರ್ಷ ಮೇಲ್ಪಟ್ಟ ಮರಗಳ ಹಣ್ಣುಗಳನ್ನು ಕಟಾವು ಮಾಡಲು ಪ್ರತಿ ಮೆಟ್ರಿಕ್ ಟನ್‌ಗೆ 1 ಸಾವಿರ ರೂನಂತೆ ಗರಿಷ್ಠ ಒಂದು ಹೆಕ್ಟೇರ್‌ಗೆ 15 ಸಾವಿರ ರೂಗಳಂತೆ ಪ್ರತಿ ಫಲಾನುಭವಿಗೆ ಗರಿಷ್ಠ 4 ಹೆಕ್ಟೇರ್‌ವರೆಗೆ ಸಹಾಯಧನ ನೀಡಲಾಗುವುದು. ತಾಳೆ ಹಣ್ಣುಗಳಿಗೆ ಖಚಿತ ಬೆಂಬಲ ಬೆಲೆಗೆ ಇಲಾಖಾ ವತಿಯಿಂದ ಖರೀದಿಸಿ ರೈತರ ಖಾತೆಗೆ ನೇರವಾಗಿ ಹಣ ಪಾವತಿಸಲಾಗುವುದು. ಪ್ರತಿ ವರ್ಷ ತಾಳೆ ಹಣ್ಣುಗಳ ಖಚಿತ ಬೆಂಬಲ ಬೆಳೆಯನ್ನು ಹಾಗೂ ಪ್ರತಿ ಮಾಹೆಗೆ ತಾಳೆ ಹಣ್ಣುಗಳ ಖರೀದಿ ದರವನ್ನು ಸರ್ಕಾರದಿಂದ ನಿಗಧಿಪಡಿಸಿ, ಸರ್ಕಾರ, ಅನುಮೋದಿತ ಸಂಸ್ಥೆಗಳು ಖರೀದಿಸಲು ಬೈಬ್ಯಾಕ್ ಒಪ್ಪಂದ ಮಾಡಿಕೊಳ್ಳಲಾಗಿದೆ.

ಮಾಹಿತಿಗಾಗಿ ಆಯಾ ತಾಲೂಕಿನ ತೋಟಗಾರಿಕೆ ಇಲಾಖೆಯನ್ನು ಸಂಪರ್ಕಿಸುವಂತೆ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾನಸಿಕ, ದೈಹಿಕ ಖಿನ್ನತೆ ಎದುರಿಸಲು ಜೀವನ ಕೌಶಲ್ಯ ತರಬೇತಿ ಅಗತ್ಯ



ಚಾಮರಾಜನಗರ : ದಿನನಿತ್ಯ ಜೀವನದ ಜಂಜಾಟದಿಂದ ಹೊರಬಾರದೇ ಮಾನಸಿಕ ಹಾಗೂ ದೈಹಿಕ ಖಿನ್ನತೆಗೆ ಒಳಗಾಗಿ ಜನರು ಸಮಸ್ಯೆಗಳನ್ನು ಎದುರಿಸಲು ಜೀವನ ಕೌಶಲ್ಯ ತರಬೇತಿ ಅಗತ್ಯವಾಗಿದೆ ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರ್‌ರಾಜ್ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರಿನ ಜನಾರೋಗ್ಯ ಕೇಂದ್ರ ನಿಮಾನ್ಸ್ ಎಪಿಡೆಮಿಯಾಲಜಿ ವಿಭಾಗ, ಹಾಗೂ ಯುವಸ್ಪಂದನ ಸಂಸ್ಥೆ ಇವರ ಸಹಯೋಗದೊಂದಿಗೆ ಏರ್ಪಡಿಸಲಾಗಿದ್ದ ಒಂದು ದಿನದ ಜೀವನ ಕೌಶಲ್ಯ ಕಾರ್ಯಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಜೀವನದಲ್ಲಿ ಪ್ರತಿಯೊಬ್ಬರು ಒಂದಲ್ಲಾ ಒಂದು ರೀತಿಯ ಸಮಸ್ಯೆ, ಗೊಂದಲ, ಒತ್ತಡದಿಂದ ಬಳಲುತ್ತಿದ್ದು, ಅವುಗಳನ್ನು ಕೌಶಲ್ಯದಿಂದ ನಿಭಾಯಿಸಿ ಉತ್ತಮ ಜೀವನ ನಡೆಸಬೇಕು. ಪೊಲೀಸ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುವವರಿಗೆ ಹೆಚ್ಚಿನ ಒತ್ತಡವಿರುತ್ತದೆ. ಜೀವನ ಕೌಶಲ್ಯ ತರಬೇತಿ ನೀಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು.

ಪ್ರತಿಯೊಬ್ಬರೂ ಒತ್ತಡ ನಿಭಾಯಿಸುವುದನ್ನು ಜೀವನದಲ್ಲಿ ರೂಢಿಸಿ ಕೊಳ್ಳಿ ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರ್‌ರಾಜ್ ಅವರು ತಿಳಿದರು.

ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಪ್ರಭಾರ ಸಹಾಯಕ ನಿರ್ದೇಶಕ ಹೆಚ್.ಎಸ್. ಗಂಗಾಧರ್ ಮಾತನಾಡಿ, ದಿನ ನಿತ್ಯದ ಜೀವನದಲ್ಲಿ ಕಚೇರಿ ಕೆಲಸ ಸೇರಿದಂತೆ ಹಲವಾರು ಬಗೆಯ ಒತ್ತಡದಿಂದ ಕರ್ತವ್ಯ ನಿರ್ವಹಿಸುತ್ತಿರುತ್ತೇವೆ. ಸಮಾಜದಲ್ಲಿ ಇತರರಿಗೆ ಮಾರ್ಗದರ್ಶಕರಾಗಲು ಜೀವನ ಕೌಶಲ್ಯ ತರಬೇತಿ ಅವಶ್ಯಕ ಎಂದು ತಿಳಿಸಿದರು.

ನಿಮಾನ್ಸ್ ಜೀವನ ಕೌಶಲ್ಯ ತರಬೇತಿದಾರರಾದ ಸ್ವಾತಿ ಸಹಾನೆ ಹಾಗೂ ಚಾಮರಾಜನಗರ ಎಂಜಿನಿಯರಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಎಸ್. ರೇಖಾ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿವಿಧ ದರ್ಜೆಯ ಪೊಲೀಸ್ ಸಿಬ್ಬಂದಿಗೆ ಉತ್ತಮ ಜೀವನ ಕೌಶಲ್ಯ ಕುರಿತು ತರಬೇತಿ ನೀಡಿದರು.

ಕಾರ್ಯಕ್ರಮದಲ್ಲಿ ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ವಿವಿಧ ಇಲಾಖೆಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ದರ್ಶನ್ ಬಹಳ ಸರಳ ಹಾಗೂ ದೊಡ್ಡ ಹೃದಯ ಹೊಂದಿರುವ ಹುಡುಗ: ಬಿಸಿ ಪಾಟೀಲ್

ಬೆಂಗಳೂರು: "ದರ್ಶನ್ ಬಹಳ ಮುಗ್ಧ, ಕೆಳಹಂತದಿಂದ ಈ ಮಟ್ಟಕ್ಕೆ ಬೆಳೆದು ಬಂದಿರುವ ನಟ. ಅವರ ಏಳಿಗೆ ಸಹಿಸಲಾಗದವರು ದುರುದ್ದೇಶದಿಂದ ಇಂತಹ ಕೇಸ್‌ಗಳನ್ನು ಹಾಕುತ್ತಿರಬಹುದು ಎನ್ನುವುದು ನನ್ನ ಭಾವನೆ" ಎಂದು ಕೃಷಿ ಬಿಸಿ ಪಾಟೀಲ್ ಹೇಳಿದ್ದಾರೆ.




ನಟ ದರ್ಶನ್ ಹೋಟೆಲ್ ಸಪ್ಲೈಯರ್ ಮೇಲೆ ಹಲ್ಲೆ ಮಾಡಿದ್ದಾರೆ ಎಂಬ ಇಂದ್ರಜಿತ್ ಲಂಕೇಶ್ ಆರೋಪದ ಕುರಿತು ಮಾತನಾಡಿದ ಪಾಟೀಲ್ ಅವರು, "ಅಂ ತಹ ಯಾವುದೇ ಕೆಲಸ ಅವರು ಮಾಡಿಲ್ಲ ಅಂತ ನನಗೆ ಮನವರಿಕೆ ಇದೆ. ದರ್ಶನ್ ಬಹಳ ಸರಳ ಹಾಗೂ ದೊಡ್ಡ ಹೃದಯ ಹೊಂದಿರುವ ಹುಡುಗ. ಆ ರೀತಿ ಯಾವ ಕೆಟ್ಟ ಕೆಲಸಗಳನ್ನು ಮಾಡುವುದಿಲ್ಲ ಎನ್ನುವುದು ನನ್ನ ಭಾವನೆ" ಎಂದರು.

ನಟ ದರ್ಶನ್ ಅವರು ಕೃಷಿ ಇಲಾಖೆಯ ರಾಯಭಾರಿಯಾಗಿದ್ದಾರೆ. ಈಗ ಹಲ್ಲೆ ಆರೋಪಗಳು ಬಂದಿರುವ ಹಿನ್ನಲೆ ಆ ಸ್ಥಾನದಿಂದ ಕೆಳಗಿಳಿಸಬಹುದು ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಬಿ.ಸಿ. ಪಾಟೀಲ್, "ಅಂತಹ ಯಾವುದೇ ನಿರ್ಧಾರ ಇಲ್ಲ. ದರ್ಶನ್ ಸಹ ಅಂತಹ ಯಾವ ಕೆಲಸವೂ ಮಾಡಿಲ್ಲ" ಎಂದು ಅವರು ಹೇಳಿದರು.

## ಕೊರೊನಾದಿಂದ 10 ಮಂದಿ ಕುಟುಂಬ ಸದಸ್ಯರನ್ನು ಕಳೆದುಕೊಂಡೆ: ಡಾ. ವಿವೇಕ್‌ಮೂರ್ತಿ

ವಾಷಿಂಗ್ಟನ್ : ಕೊರೊನಾ ಸೋಂಕಿನಿಂದಾಗಿ ನಾನು 10 ಮಂದಿ ಕುಟುಂಬ ಸದಸ್ಯರನ್ನು ಕಳೆದುಕೊಂಡಿದ್ದೇನೆ ಎಂದು ಯುಎಸ್ ಸರ್ಜನ್ ಜನರಲ್ ಡಾ. ವಿವೇಕ್‌ಮೂರ್ತಿ ಹೇಳಿದ್ದಾರೆ.



ಮಾರಕ ವೈರಾಣುವಿನಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಅಮೆರಿಕ ಪ್ರಜೆಗಳು ಲಸಿಕೆ ಹಾಕಿಸಿಕೊಳ್ಳಬೇಕೆಂದು ಮನವಿ ಮಾಡಿದ್ದಾರೆ.

ಶ್ವೇತಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇನ್ನೂ ಲಕ್ಷಾಂತರ ಜನರು ಕೋವಿಡ್ ಲಸಿಕೆ ಹಾಕಿಸಿ ಕೊಂಡಿಲ್ಲ, ಇಂತಹ ಜನರಲ್ಲಿ ಹೆಚ್ಚಿನ ಸೋಂಕನ್ನು ನಾವು ನೋಡುತ್ತಿದ್ದೇವೆ. ಕೋವಿಡ್‌ನಿಂದ ಸಂಭವಿಸಿದ ಪ್ರತಿ ಯೊಂದು ಸಾವುಗಳು ನೋವನ್ನುಂಟು ಮಾಡಿವೆ. ಯಾರೇ ಆಗಲೀ ಲಸಿಕೆ ಪಡೆದುಕೊಳ್ಳಲು ಅವಕಾಶ ಇರುವುದಾಗಿ ಅವರು ಹೇಳಿದರು.

ಲಸಿಕೆಗೆ ಇನ್ನೂ ಅರ್ಹತೆ ಪಡೆಯದ ಇಬ್ಬರು ಚಿಕ್ಕ ಮಕ್ಕಳ ತಂದೆಯಾಗಿ ನಾನು ನೋಡುತ್ತೇನೆ. ಆದರೆ, ಈ ವೈರಸ್‌ನಿಂದ ರಕ್ಷಿಸಿಕೊಳ್ಳಲು ಲಸಿಕೆ ಪಡೆಯಲು ನಮ್ಮ ಮಕ್ಕಳು ನಮ್ಮೆಲ್ಲರನ್ನೂ ಅವಲಂಬಿಸಿದ್ದಾರೆ ಎಂಬುದು ನನಗೆ ತಿಳಿದಿದೆ ಎಂದ ಅವರು, ತಪ್ಪು ಮಾಹಿತಿಯ ವಿರುದ್ಧ ಅಭಿಯಾನವನ್ನು ಪ್ರಾರಂಭಿಸಿದ ಭಾರತೀಯ-ಅಮೆರಿಕದ ತಜ್ಞ ವೈದ್ಯ ಡಾ. ವಿವೇಕ್ ಮೂರ್ತಿ, ಆರೋಗ್ಯ ಮಾಹಿತಿಯನ್ನು ಇತರರೊಂದಿಗೆ ಹಂಚಿಕೊಳ್ಳುವ ಮೊದಲು ಅವುಗಳು ನಂಬಲಾರ್ಹ ವೈಜ್ಞಾನಿಕ ಮೂಲಗಳಿಂದ ಬೆಂಬಲಿತವಾಗಿವೆಯೇ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದ್ದಾರೆ. ಈವರೆಗೂ 160 ಮಿಲಿಯನ್ ಅಮೆರಿಕನ್ನರು ಲಸಿಕೆ ಹಾಕಿಸಿಕೊಂಡಿರುವುದು ಒಳ್ಳೆಯ ಸುದ್ದಿ ಎಂದಿದ್ದಾರೆ.

## ಮಧುಚಂದನ್‌ರ ಆರೋಪ ರಾಜಕೀಯ ಪ್ರೇರಿತ, ದುರುದ್ದೇಶ-ರಾಮಚಂದ್ರು

ಮಂಡ್ಯ: ಜು.13 ರಂದು ಗೆಜ್ಜಲಗೆರೆ ಹಾಲು ಒಕ್ಕೂಟದ ಮುಂಭಾಗ ನಡೆದ ಪ್ರತಿಭಟನೆಯಲ್ಲಿ ಮಧುಚಂದನ್‌ರವರು ಇಲ್ಲಸಲ್ಲದ ಆರೋಪಗಳನ್ನು ಮಾಡಿರುತ್ತಾರೆ. ಅವರ ಉದ್ದೇಶ ರಾಜಕೀಯ ಪ್ರೇರಿತವಾಗಿದ್ದು, ದುರುದ್ದೇಶಗಳಿಂದ ಕೂಡಿರುತ್ತದೆ. ಅವರು ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾದವುಗಳಾಗಿವೆ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ರಾಮಚಂದ್ರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ರೀತಿ ಇಲ್ಲಸಲ್ಲದ ಆರೋಪ ಮಾಡಿ ರೈತರು, ಉತ್ಪಾದಕರು ಮತ್ತು ಮಾಧ್ಯಮದ ಮುಂದೆ ಸುಳ್ಳು ಹೇಳುವುದರಿಂದ ರೈತರನ್ನು ದಾರಿ ತಪ್ಪಿಸಿದಂತಾಗುತ್ತದೆ. ಇದರಿಂದ ಒಕ್ಕೂಟಕ್ಕೆ ಧಕ್ಕೆಯುಂಟಾಗುತ್ತದೆ. ಯಾವುದೇ ಮಾಹಿತಿ ಹಾಗೂ ಅಂಕಿ ಅಂಶಗಳೂ ಇಲ್ಲದೇ ನಿರಾಧಾರವಾದ ಆರೋಪವನ್ನು ಅವರು ಮಾಡಿರುತ್ತಾರೆ. ಆಡಳಿತ ಮಂಡಳಿ ನಿರ್ದೇಶಕರುಗಳ ಮೇಲೆ ಮಾನ ಹಾನಿ ಉಂಟು ಮಾಡುವ ಹೇಳಿಕೆಗಳನ್ನು ನೀಡಿರುತ್ತಾರೆ. ಅವರದು ರೈತರಿಗಾಗಲೀ ಅಥವಾ ಉತ್ಪಾದಕರುಗಳಿಗಾಗಲೀ ಒಳ್ಳೆಯ ಕೆಲಸ ಮಾಡುವ ಉದ್ದೇಶವಲ್ಲ. ಇದರಿಂದ ಮಂಡ್ಯ ಹಾಲು ಒಕ್ಕೂಟಕ್ಕೆ ಮತ್ತು ಆಡಳಿತ ಮಂಡಳಿಯವರ ವ್ಯಕ್ತಿತ್ವಕ್ಕೆ ಧಕ್ಕೆಯುಂಟು ಮಾಡುತ್ತಿದ್ದಾರೆ ಎಂದು ಕಿಡಿ ಕಾರಿದರು.

ಅವರು ಮಾಡಿರುವ ಆರೋಪಗಳಲ್ಲಿ ತಿಳಿಸಿರುವ ಅಂಕಿಅಂಶಗಳಲ್ಲಿ ಯಾವುದೇ ಹುರುಳಿಲ್ಲ. ನಮ್ಮ ಮೇಲೆ ಸುಳ್ಳು ಆರೋಪ ಮಾಡುತ್ತಿರುವ ಇವರು ಹಾಲು ಉತ್ಪಾದಕರೇ ಅಲ್ಲ,ಆದರೂ ಸ್ವದೇಶಿ ಹಾಲು ಉತ್ಪಾದಕ ಎಂದು ಹೇಳಿಕೊಂಡು ಮಾಡುತ್ತಿರುವ ವ್ಯವಹಾರದ ಬಗ್ಗೆ ಮಾಹಿತಿ ಕೊಡಲಿ.ಯಾವುದೇ ಬಹಿರಂಗ ಚರ್ಚೆಗೆ ಸಿದ್ಧ ಎಂದು ಸವಾಲು ಹಾಕಿದರು.




ಹಿಂದಿನ ವ್ಯವಸ್ಥಾಪಕ ನಿರ್ದೇಶಕರಾದ ಮಹೇಶ್‌ರನ್ನು ಆಂತರಿಕ ವಿಚಾರಣೆ ಸಮಿತಿಗೆ ನೇಮಕ ಮಾಡಿದ್ದಾರೆ ಎಂಬುದು ಸುಳ್ಳು ಆರೋಪವಾಗಿದೆ ಎಂದರು. ಹಾಲಿನ ಹಗರಣಕ್ಕೆ ಸಂಬಂಧಿಸಿದಂತೆ ಯಾರು ಯಾವುದೇ ರೀತಿಯ ಹೋರಾಟವನ್ನು ಮಾಡಲಿ. ಆದರೆ ಅದರಲ್ಲಿ ರಾಜಕೀಯ ಬೆರೆಸುವುದು ಬೇಡ. ನ್ಯಾಯದ ಹೋರಾಟಕ್ಕೆ ನಮ್ಮದು ಸಹ ಬೆಂಬಲ ಇದೆ. ಯಾವುದೇ ರೀತಿಯ ತನಿಖೆಗೆ ಆಡಳಿತ ಮಂಡಳಿ ಸಿದ್ಧವೆಂದು ಅವರು ತಿಳಿಸಿದರು.

ಒಕ್ಕೂಟದ ನಿರ್ದೇಶಕ ನೆಲ್ಲಿಗೆರೆ ಬಾಲು ಮಾತನಾಡಿ ಒಕ್ಕೂಟದಲ್ಲಿ 1.9 ಲಕ್ಷ ಹಾಲು ಉತ್ಪಾದಕರ ಹಿತ ಅಡಗಿದೆ. ಯಾವುದೇ ರಾಜಕೀಯ ಪಕ್ಷದವರು, ಹೋರಾಟಗಾರರು ಮಾಡುತ್ತಿರುವ ಸುಳ್ಳು ಆರೋಪಗಳಿಂದ ಮನ್ಮುಲ್ ವ್ಯಾಪಾರ ವಹಿವಾಟಿಗೆ ತೀವ್ರ ಹಿನ್ನಡೆ ಆಗುತ್ತದೆ. ಒಕ್ಕೂಟದಲ್ಲಿ ಯಾವುದೇ ಲೋಪದೋಷ ಇದ್ದಲ್ಲಿ ಸಲಹೆ, ಸಹಕಾರ ನೀಡಿ ಏನೇ ತಪ್ಪಿದರೂ ತಿದ್ದಿಕೊಳ್ಳಲು ನಾವು ಸಿದ್ಧರಿದ್ದೇವೆ ಯಾವುದೇ ರೀತಿಯ ತನಿಖೆಗೂ ಸಹ ಸಹಕರಿಸುತ್ತವೆ ಒಳ್ಳೆಯ ಹೆಸರು ಗಳಿಸಿರುವ ಒಕ್ಕೂಟವನ್ನು ಮಾದರಿಯಾಗಿ ಬೆಳೆಸೋಣ. ವಿನಾಕಾರಣ ಅಪಪ್ರಚಾರ ಬೇಡ ಎಂದು ಮನವಿ ಮಾಡಿದರು. ರೈತರಿಗೆ ದ್ರೋಹವಾದರೆ ಒಂದು ನಿಮಿಷವು ಈ ಸ್ಥಾನದಲ್ಲಿ ಕುಳಿತುಕೊಳ್ಳುವುದಿಲ್ಲ ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಉಪಾಧ್ಯಕ್ಷ ರಘುನಂದನ್ ನಿರ್ದೇಶಕರುಗಳಾದ ಬೋರೇಗೌಡ, ರೂಪ, ರವಿ, ಶಿವಕುಮಾರ್ ಹಾಗೂ ಕೆ.ರವಿ ಉಪಸ್ಥಿತರಿದ್ದರು.